**<u>ಗೌರವಾನ್ವಿತ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಅರಕಲಗೂಡು.</u>**

**ಅಪರಾಧ ಪ್ರಕರಣ ಸಂಖ್ಯೆ: 623/2018**

| | | |
|---|---|---|
| **ಸಾಕ್ಷಿಯ ಹೆಸರು** | ಡಾ: ಧನಂಜಯ , 59 ವರ್ಷ | ಚಾಸಾ-5 |
| **ತಂದೆಯ ಹೆಸರು** | ನಾರಾಯಣಪ್ಪ | |
| **ಉದ್ಯೋಗ** | ವೈದ್ಯಾದಿಕಾರಿ , ಆಲೂರು | ಪ್ರಾಸಾ-4 |
| **ವಾಸ ಸ್ಥಳ** | ಆಲೂರು | |
| **ದಿನಾಂಕ: 09.10.2025** ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು. | | |

**<u>ಮುಖ್ಯ ವಿಚಾರಣೆ:</u>** ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದ

ನಾನು ಅರಕಲಗೂಡಿನಲ್ಲಿ 2014 ರಿಂದ 2018 ರವರೆಗೆ ವೈದ್ಯಾದಿಕಾರಿಯಾಗಿ ಸರ್ಕಾರಿ ಆಸ್ಪತ್ರೆಯಲ್ಲಿ ಕರ್ತವ್ಯ ಮಾಡಿರುತ್ತೇನೆ.

ದಿ: 18.05.2018 ರಂದು ಚಾಸಾ 1 ರವರು ಮ. 1-15 ಗಂಟೆಗೆ ನನ್ನ ಬಳಿ ಬಂದಿರುತ್ತಾರೆ. ಚಾಸಾ 1 ರವರಿಗೆ ಹಲ್ಲೆ ಆಗಿರುವ ವಿಚಾರವಾಗಿ ಬಂದಿರುತ್ತಾರೆ. ಅವರನ್ನು ಪರೀಕ್ಷಿಸಿದ್ದು ಅವರಿಗೆ ಒಂದು ಗಾಯವಾಗಿದ್ದು ಕಂಡು ಬಂದಿರುತ್ತದೆ. ಸದರಿ ಗಾಯಗಳು ಕೆಳಕಂಡಂತೆ ಇರುತ್ತದೆ.

1. ಎಡಕೈನ ಕಿರುಬೆರಳಿಗೆ ಹರಿದ ಗಾಯ
2. ಎದೆಯ ಮೇಲೆ ಊತ ಗಾಯ
3. ದೇಹದ ಇತರ ಭಾಗಗಳಲ್ಲಿ ನೋವು.

ಸದರಿ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತದೆ. ಈ ಸಂಬಂದ ನಾನು ದಿನಾಂಕ 29.06.2018 ರಂದು ನೀಡಿರುವ ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 3 ಎಂದು ಸಾಕ್ಷಿಯ ಸಹಿಯನ್ನು ನಿಪಿ 3ಎ ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು:</u>** ಆರೋಪಿ ಪರ ವಕೀಲರು **ಶ್ರೀ. ಆರ್ ಸಿ** ರವರಿಂದ.

ಎಡಕೈನ ಕಿರುಬೆರಳಿಗೆ ಆಗಿದೆ ಎಂದು ಹೇಳಿರುವ ಗಾಯವು ಯಾವುದರಿಂದ ಆಗಿರುತ್ತದೆ ಎಂಬುದನ್ನು ನಿಪಿ 3 ರಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿ. ನಿಪಿ 3 ರಲ್ಲಿ ಕಂಡ ಗಾಯಗಳು ಸಾಮಾನ್ಯವಾಗಿ ನೆಲದ ಮೇಲೆ ಬಿದ್ದಾಗ ಯಾವುದೇ ಚೂಪಾದ ಆಯುಧಕ್ಕೆ ತಾಗಿದರೆ ಆಗುವ ಸಾದ್ಯತೆ ಇದೆ ಎಂದರೆ ಸರಿ. ಚಾಸಾ 1 ರವರಿಗೆ ಸಹಾಯ ಮಾಡುವ

ಉದ್ದೇಶದಿಂದ ಆರೋಪಿಯ ವಿರುದ್ದ ಸುಳ್ಳು ದಾಖಲೆ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ 3 ರಲ್ಲಿ ಕಂಡ ಗಾಯಗಳ ವಯಸ್ಸು ನಮೂದಾಗಿಲ್ಲ ಎಂದರೆ ಸರಿ.

**ಮರುವಿಚಾರಣೆ - ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿಯಿದೆ.

**ಪ್ರ. ಸಿವಿಲ್ ಮತ್ತು ಜೆ.ಎಂ.ಎಫ್.ಸಿ.ನ್ಯಾಯಾಧೀಶರು.**
**ಅರಕಲಗೂಡು**